ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2019–20 ದಿನಾಂಕ: 10–08–2019

# ರಾಜ್ಯದಲ್ಲಿನ ಪ್ರವಾಹ ಪರಿಸ್ಥಿತಿ ಕುರಿತು ಸನ್ಮಾನ್ಯ ಮುಖ್ಯಮಂತ್ರಿಗಳ ಪತ್ರಿಕಾಗೋಷ್ಠಿಗೆ ಟಿಪ್ಪಣಿ

**ದಿನಾಂಕ 10–8–2019 / 12.00 ಗಂಟೆ / ಸ್ಥಳ: ಗೃಹ ಕಛೇರಿ ಕೃಷ್ಣಾ, ಬೆಂಗಳೂರು**

- ಕಳೆದ ಒಂದು ವಾರದಿಂದ ಮಹಾರಾಷ್ಟ್ರ ಮತ್ತು ನಮ್ಮ ರಾಜ್ಯದಲ್ಲಿ ಭಾರಿ ಮಳೆಯಾಗುತ್ತಿದ್ದು, ಉತ್ತರ ಕರ್ನಾಟಕ, ಕರಾವಳಿ ಹಾಗೂ ಮಲೆನಾಡು ಭಾಗದಲ್ಲಿ ಪ್ರವಾಹ ಹಾಗೂ ಭೂಕುಸಿತದಿಂದಾಗಿ ಜನತೆ ತೀವ್ರ ಸಂಕಷ್ಟಕ್ಕೊಳಗಾಗಿದ್ದಾರೆ.
- ಆಸ್ತಿ–ಪಾಸ್ತಿಗೆ ಅಪಾರ ಹಾನಿಯಾಗಿರುವುದನ್ನು ನಾವು ನೋಡಿದ್ದೇವೆ.
- ರಾಜ್ಯದ ಸುಮಾರು ಅರ್ಧಭಾಗ ಮಳೆಯ ರುದ್ರನರ್ತನ ಹಾಗೂ ಪ್ರವಾಹದ ವಿಕೋಪಕ್ಕೆ ಬಲಿಯಾಗಿದೆ.
- ಕಳೆದ 45 ವರ್ಷಗಳಲ್ಲಿ ಇಂತಹ ಭೀಕರ ಪ್ರವಾಹ ಪರಿಸ್ಥಿತಿಯನ್ನು ರಾಜ್ಯ ಕಂಡಿರಲಿಲ್ಲ.
- ಈ ವರೆಗೆ **16** ಜಿಲ್ಲೆಗಳ 80 ತಾಲ್ಲೂಕುಗಳಲ್ಲಿ ಪ್ರವಾಹ ಪರಿಸ್ಥಿತಿಯಿಂದಾಗಿ **24** ಮಂದಿ ಸಾವನ್ನಪ್ಪಿದ್ದಾರೆ. ಸತ್ತವರ ಕುಟುಂಬಗಳಿಗೆ ತಲಾ ರೂ. 5 ಲಕ್ಷಗಳಂತೆ ಪರಿಹಾರ ನೀಡಲಾಗುತ್ತಿದೆ.

- ಒಟ್ಟು 1024 ಗ್ರಾಮಗಳು ಮಳೆ ಹಾಗೂ ಪ್ರವಾಹದ ಭೀಕರತೆ ಎದುರಿಸುತ್ತೀವೆ.
- **2,35,105** ಜನರನ್ನು ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರಿಸಲಾಗಿದೆ.
- **222** ಜಾನುವಾರುಗಳು ಸಾವನ್ನಪ್ಪಿದ್ದು, 44,013 ಜಾನುವಾರುಗಳನ್ನು ಸ್ಥಳಾಂತರಿಸಲಾಗಿದೆ.
- ರಾಜ್ಯದಲ್ಲಿ ಒಟ್ಟು **624** ಪರಿಹಾರ ಕೇಂದ್ರಗಳನ್ನು ತೆರೆದಿದ್ದೇವೆ. ಅದರಲ್ಲಿ ಆಹಾರ, ವಸ್ತ್ರ, ಹೊದಿಕೆ, ಔಷಧ ಮತ್ತಿತರ ಅಗತ್ಯ ಮೂಲಸೌಲಭ್ಯಗಳನ್ನು ಒದಗಿಸಲಾಗಿದೆ.
- ಈ ಪರಿಹಾರ ಕೇಂದ್ರಗಳಲ್ಲಿ **1,57,498** ಜನರು ಆಶ್ರಯ ಪಡೆದಿದ್ದಾರೆ.
- **3,22,448** ಹೆಕ್ಟೇರ್ ಕೃಷಿ ಭೂಮಿಯಲ್ಲಿ ಪ್ರವಾಹ ಹಾಗೂ ಭೂ ಕುಸಿತದಿಂದ ಹಾನಿ ಸಂಭವಿಸಿದೆ.
- ಸಾವಿರಾರು ಜನ ಮನೆ–ಮಠ ಕಳೆದುಕೊಂಡು ಸಂಕಷ್ಟಕ್ಕೆ ಸಿಲುಕಿದ್ದಾರೆ. 12,651 ಮನೆಗಳಿಗೆ ಹಾನಿಯಾಗಿದೆ.
- ಕಳೆದ ವಾರ ಉತ್ತರ ಕರ್ನಾಟಕ ಭಾಗದಲ್ಲಿ ಪ್ರವಾಹ ಪರಿಸ್ಥಿತಿ ಇತ್ತು. ನಾನು ಮತ್ತು ಮುಖ್ಯ ಕಾರ್ಯದರ್ಶಿಗಳು ಸಂಬಂಧಿಸಿದ ಜಿಲ್ಲಾಧಿಕಾರಿಗಳ ಜೊತೆಗೆ ವಿಡಿಯೋ ಕಾನ್ಫರೆನ್ಸ್ ಮೂಲಕ ಸಂವಾದ ನಡೆಸಿ, ಪರಿಸ್ಥಿತಿ ಅವಲೋಕಿಸಿದ್ದೇನೆ.
- ಸೋಮವಾರ, ಆಗಸ್ಟ್ 5 ರಂದು ನಾನು ರಾಯಚೂರು, ಯಾದಗಿರಿ, ವಿಜಯಪುರ, ಬಾಗಲಕೋಟೆ, ಗದಗ, ಹಾಗೂ ಬೆಳಗಾವಿ ಜಿಲ್ಲೆಗಳಲ್ಲಿ ವೈಮಾನಿಕ ಸಮೀಕ್ಷೆ ನಡೆಸಿದ್ದೇನೆ.

- ದೆಹಲಿಗೆ ತೆರಳಿ ಪ್ರಧಾನ ಮಂತ್ರಿಗಳು ಮತ್ತಿತರ ಹಿರಿಯ ಸಚಿವರನ್ನು ಭೇಟಿ ಮಾಡಿದ ಸಂದರ್ಭದಲ್ಲಿ ರಾಜ್ಯದ ಪ್ರವಾಹ ಪರಿಸ್ಥಿತಿ ಕುರಿತು ಚರ್ಚೆ ನಡೆಸಿದ್ದೆ, ಹಾಗೂ ಹೆಚ್ಚಿನ ನೆರವಿಗಾಗಿ ಮನವಿ ಮಾಡಿದ್ದೆ.

- ಕಳೆದ ಮೂರು–ನಾಲ್ಕು ದಿನಗಳಿಂದ ಹಾಸನ, ಶಿವಮೊಗ್ಗ, ಚಿಕ್ಕಮಗಳೂರು, ಕೊಡಗು, ದಕ್ಷಿಣಕನ್ನಡ, ಉತ್ತರ ಕನ್ನಡ ಜಿಲ್ಲೆಗಳಲ್ಲಿಯೂ ಪರಿಸ್ಥಿತಿ ತೀವ್ರ ಗಂಭೀರವಾಗಿದೆ.

- ಮಂಗಳೂರಿಗೆ ರಸ್ತೆ, ರೈಲು ಸಂಪರ್ಕ ಕಡಿತವಾಗಿದೆ. ಕೊಡಗು – ದಕ್ಷಿಣ ಕನ್ನಡದ ಹಲವು ಕಡೆಗಳಲ್ಲಿ ಭೂ ಕುಸಿತದಿಂದ ಸಾವು ನೋವುಗಳು ಉಂಟಾಗಿವೆ.

- ಪ್ರವಾಹ ಪೀಡಿತ ಜಿಲ್ಲೆಗಳಿಗೆ ಭೇಟಿ ನೀಡಿ, ಪರಿಹಾರ ಕ್ರಮಗಳ ಉಸ್ತುವಾರಿ ಮುಂದುವರೆಸಿದ್ದೇನೆ.

- ನಾನು ದೆಹಲಿ ಪ್ರವಾಸವನ್ನು ಮೊಟಕುಗೊಳಿಸಿ ಹಿಂದಿರುಗಿದ ನಂತರ ಬೆಳಗಾವಿ, ಬಾಗಲಕೋಟೆ, ಗದಗ, ಧಾರವಾಡ ಜಿಲ್ಲೆಗಳ ಹಲವಾರು ಸ್ಥಳಗಳಿಗೆ **(ಬೆಳಗಾವಿ ಜಿಲ್ಲೆ:** ಬೆಳಗಾವಿ ನಗರ, ಸಂಕೇಶ್ವರ, ಚಿಕ್ಕೋಡಿ. **ಬಾಗಲಕೋಟೆ ಜಿಲ್ಲೆ:** ಮುಧೋಳ ಚಿಕ್ಕಪಡಸಲಗಿ, ಹಿಪ್ಪರಗಿ, ಮಹಾಲಿಂಗಪೂರ, ಢವಳೇಶ್ವರ, ಕೂಡಲಸಂಗಮ, ಬಾದಾಮಿ, **ಗದಗ ಜಿಲ್ಲೆ:** ನರಗುಂದ ಮತ್ತು **ಹುಬ್ಬಳಿ–ಧಾರವಾಡ)** ಭೇಟಿ ನೀಡಿ, ಪ್ರವಾಹ ಪರಿಸ್ಥಿತಿಯ ಪರಿಶೀಲನೆ ನಡೆಸಿದ್ದೇನೆ. ಪರಿಹಾರ ಕೇಂದ್ರಗಳಿಗೆ ಭೇಟಿ ನೀಡಿ ಸಾಂತ್ವನ ಹೇಳಿದ್ದೇನೆ.

- ರಕ್ಷಣಾ ಕಾರ್ಯಾಚರಣೆ ಸಿಬ್ಬಂದಿಗೆ ನೈತಿಕ ಸ್ಥೈರ್ಯ ತುಂಬಿದ್ದೇನೆ.

- ಅಧಿಕಾರಿಗಳು ಮಹಾರಾಷ್ಟ್ರದ ಆಣೆಕಟ್ಟುಗಳಿಂದ ಬಿಡುಗಡೆ ಮಾಡಲಾಗುತ್ತಿರುವ ನೀರಿನ ಪ್ರಮಾಣದ ಕುರಿತು ತೀವ್ರ ನಿಗಾ ವಹಿಸಿದ್ದು, ನದೀ ತೀರದ ಗ್ರಾಮಗಳಿಗೆ ಎಚ್ಚರಿಕೆ ಸಂದೇಶ ನೀಡಲಾಗುತ್ತಿದೆ.
- ಅಂತೆಯೇ ಮಲೆನಾಡು ಭಾಗದ ಅಣೆಕಟ್ಟುಗಳಲ್ಲಿನ ಒಳಹರಿವು ಮತ್ತು ಹೊರ ಹರಿವುಗಳನ್ನು ವ್ಯವಸ್ಥಿತವಾಗಿ ನಿಯಂತ್ರಿಸಲಾಗುತ್ತಿದೆ.
- ಹೇಮಾವತಿ ಮತ್ತು ತುಂಗಭದ್ರಾ ಕಾಲುವೆಗಳಲ್ಲಿಯೂ ನೀರು ಹರಿಸುವ ತೀರ್ಮಾನ ಕೈಗೊಂಡಿದ್ದೇವೆ.
- ಅಣೆಕಟ್ಟುಗಳಲ್ಲಿನ ನೀರಿನ ಮಟ್ಟ ಹಾಗೂ ಒಳ ಮತ್ತು ಹೊರ ಹರಿವಿನ ವಿವರ: ಇಂದು ನಾರಾಯಣಪುರ ಜಲಾಶಯಕ್ಕೆ ಒಳ ಹರಿವು 5,50,000 ಕ್ಯೂಸೆಕ್ಸ್ ಹೊರ ಹರಿವು 5,40,000 ಕ್ಯೂಸೆಕ್ಸ್.
- ಆಲಮಟ್ಟಿ ಜಲಾಶಯಕ್ಕೆ ಒಳ ಹರಿವು 5,15,000 ಕ್ಯೂಸೆಕ್ಸ್ ಹಾಗೂ ಹೊರ ಹರಿವು 5,00,000 ಕ್ಯೂಸೆಕ್ಸ್.
- ಕೆ.ಆರ್.ಎಸ್ ಒಳ ಹರಿವು – 110000 ಹೊರ ಹರಿವು 441 ಕ್ಯೂಸೆಕ್ಸ್ ನದಿಗೆ
- ಕಬಿನಿ ಒಳ ಹರಿವು – 112511 ಹೊರ ಹರಿವು 102083 ಕ್ಯೂಸೆಕ್ಸ್.
- ಹಾರಂಗಿ ಒಳ ಹರಿವು – 18560 ಹೊರ ಹರಿವು 16041 ಕ್ಯೂಸೆಕ್ಸ್.
- ಹೇಮಾವತಿ ಒಳ ಹರಿವು – 113435 ಹೊರ ಹರಿವು 50300 ಕ್ಯೂಸೆಕ್ಸ್.
- ಪರಿಸ್ಥಿತಿಯನ್ನು ನಿಭಾಯಿಸಲು ಅಗತ್ಯವಾದಂತೆಲ್ಲ ಕೇಂದ್ರ ಸರ್ಕಾರ, ಸೇನೆಯ ನೆರವು ಕೇಳಿದ್ದೇವೆ. ಸಕಾಲದಲ್ಲಿ ಕೇಂದ್ರ ಸರ್ಕಾರವೂ ಸ್ಪಂದಿಸಿದೆ.

- ಭೂ ಸೇನೆ, ನೌಕಾಪಡೆ ಮತ್ತು ವಾಯು ಪಡೆ (Army, Navy and Airforce) ಗಳ ನೆರವು ಪಡೆದಿದ್ದೇವೆ.

- ಪ್ರಸ್ತುತ ಎನ್.ಡಿ.ಆರ್.ಎಫ್‌ನ 20 ತಂಡಗಳು, ಸೇನೆಯ 11 ತಂಡಗಳು, ನೌಕಾಪಡೆಯ 5 ತಂಡಗಳು / ದೋಣಿಗಳು, ವಾಯುಪಡೆಯ 4 ಹೆಲಿಕಾಪ್ಟರುಗಳು, ಎಸ್.ಡಿ.ಆರ್.ಎಫ್.ನ 2 ತಂಡಗಳು, ಅಗ್ನಿಶಾಮಕ ದಳದ ಸಿಬ್ಬಂದಿ, ಪೊಲೀಸ್ ಸಿಬ್ಬಂದಿ ಮತ್ತಿತರರು ರಕ್ಷಣಾ ಕಾರ್ಯದಲ್ಲಿ ನಿರತರಾಗಿದ್ದಾರೆ.

- ಸರ್ಕಾರದಿಂದ ಪ್ರವಾಹ ಪೀಡಿತ ಜಿಲ್ಲೆಗಳಿಗೆ ಒಟ್ಟು 100 ಕೋಟಿ ರೂ. ಗಳನ್ನು ಬಿಡುಗಡೆ ಮಾಡಿದ್ದೇವೆ. ವಿವರವನ್ನು ನಿನ್ನೆಯೇ ನಿಮಗೆ ಕೊಟ್ಟಿದ್ದೇವೆ. ಈಗ ಮತ್ತೆ ನೀಡುತ್ತೇವೆ.

- ಸರ್ಕಾರದ ಹಿರಿಯ ಅಧಿಕಾರಿಗಳು ನಿರಂತರವಾಗಿ ಜಿಲ್ಲಾಡಳಿತಗಳೊಂದಿಗೆ ಸಂಪರ್ಕದಲ್ಲಿದ್ದು, ಮಾರ್ಗದರ್ಶನ ನೀಡುತ್ತಿದ್ದಾರೆ. ಅಗತ್ಯಕ್ಕೆ ಅನುಗುಣವಾಗಿ ಹೆಚ್ಚುವರಿ ರಕ್ಷಣಾ ಸಿಬ್ಬಂದಿ ಮತ್ತು ಇತರ ಸೌಲಭ್ಯಗಳನ್ನು ಒದಗಿಸಲು ಕ್ರಮ ವಹಿಸುತ್ತಿದ್ದಾರೆ.

- ಶಾಸಕರು, ಸಂಸದರ ತಂಡಗಳನ್ನು ರಚಿಸಿದ್ದು, ಅವರು ತಮಗೆ ನಿಗದಿ ಪಡಿಸಿದ ಜಿಲ್ಲೆಗಳಿಗೆ ಭೇಟಿ ನೀಡಿ ರಕ್ಷಣೆ ಮತ್ತು ಪರಿಹಾರ ಕಾರ್ಯಗಳು ಸಮರ್ಪಕವಾಗಿ ನಡೆಯುತ್ತಿದೆಯೇ ಎಂದು ಪರಿಶೀಲಿಸಿದ್ದಾರೆ. ಅಧಿಕಾರಿಗಳೊಂದಿಗೆ ಸಭೆ ನಡೆಸಿ ಸಲಹೆ–ಸೂಚನೆಗಳನ್ನು ನೀಡಿದ್ದಾರೆ.

- ಇಂದು ನಾನು ಮತ್ತೊಮ್ಮೆ ಹಿರಿಯ ಅಧಿಕಾರಿಗಳ ಸಭೆ ನಡೆಸಿ, ರಾಜ್ಯದ ಒಟ್ಟಾರೆ ಪರಿಸ್ಥಿತಿ ಕುರಿತು ಮಾಹಿತಿ ಪಡೆದುಕೊಂಡಿದ್ದೇನೆ.

- ಮುಂದೆ ಕೈಗೊಳ್ಳಬೇಕಾದ ರಕ್ಷಣಾ ಕಾರ್ಯಾಚರಣೆ ಕುರಿತು ಚರ್ಚಿಸಿ, ತೀರ್ಮಾನ ಕೈಗೊಂಡಿದ್ದೇವೆ.
- ಮತ್ತೆ ಎಲ್ಲ ಸಹಜ ಸ್ಥಿತಿಗೆ ಬೇಗನೆ ಹಿಂದಿರುಗಲಿ ಎಂದು ಭಗವಂತನನ್ನು ಪ್ರಾರ್ಥನೆ ಮಾಡುತ್ತೇನೆ.
- ಪರಿಸ್ಥಿತಿಯನ್ನು ಎದೆಗುಂದದೆ ಎದುರಿಸುವಂತೆ ಪ್ರವಾಹ ಪೀಡಿತ ಜನರಿಗೆ ಮನವಿ ಮಾಡುತ್ತೇವೆ.
- ಧೈರ್ಯಗುಂದಬೇಡಿ. ನಿಮ್ಮ ಜೊತೆ ಸರ್ಕಾರ ಇದೆ; ಇಡೀ ನಾಡಿನ ಜನತೆ ನಿಮ್ಮ ಬೆನ್ನಿಗೆ ಇದ್ದಾರೆ.
- ನಿಮ್ಮ ಸುರಕ್ಷತೆ, ಪುನರ್ವಸತಿಗೆ ಎಲ್ಲ ಕ್ರಮ ಕೈಗೊಳ್ಳುತ್ತೇವೆ.
- ಯಾರೂ ಭರವಸೆ ಕಳೆದುಕೊಳ್ಳಬೇಡಿ ಎಂದು ಮನವಿ ಮಾಡುತ್ತೇನೆ.
- ಈ ಸಂದರ್ಭದಲ್ಲಿ ಮಾಧ್ಯಮಗಳು ಉತ್ತಮ ಸಹಕಾರ ನೀಡಿದ್ದೀರಿ. ನಿಮಗೆಲ್ಲರಿಗೂ ನಾನು ಕೃತಜ್ಞತೆ ಹೇಳ ಬಯಸುತ್ತೇನೆ.
- ಜೊತೆಗೆ ಜನರಿಗೆ ಕಾಲ ಕಾಲಕ್ಕೆ ಮಾಹಿತಿ ನೀಡುವ ಮೂಲಕ ರಕ್ಷಣೆ ಮತ್ತು ಪರಿಹಾರ ಕಾರ್ಯಾಚರಣೆಗೆ ಕೈಜೋಡಿಸಿ ಎಂದು ವಿನಂತಿಸುತ್ತೇನೆ.
- ಜನರು ಯಾವುದೇ ವದಂತಿಗಳಿಗೆ ಕಿವಿಗೊಡಬೇಡಿ. ಈ ನಿಟ್ಟಿನಲ್ಲಿ ಮಾಧ್ಯಮಗಳ ಸಹಯೋಗವೂ ಅತಿ ಮುಖ್ಯವಾಗುತ್ತದೆ.
- ರಾಜ್ಯದಲ್ಲಿ ತಲೆದೋರಿರುವ ಈ ಭೀಕರ ಪ್ರವಾಹ ಪರಿಸ್ಥಿತಿಯನ್ನು ನಿಭಾಯಿಸುವಲ್ಲಿ ಮತ್ತೊಮ್ಮೆ ಎಲ್ಲರ ಸಹಕಾರ ಕೋರುತ್ತೇನೆ.
- ವಸ್ತು ರೂಪದಲ್ಲಿಯಾಗಲೀ, ಹಣದ ರೂಪದಲ್ಲಿಯಾಗಲೀ ನಿಮ್ಮ ನೆರವು ನೀಡಬಹುದು.

- ಧನ ಸಹಾಯ ನೀಡುವವರು ಮುಖ್ಯಮಂತ್ರಿಗಳ ಪರಿಹಾರ ನಿಧಿ ಖಾತೆಗೆ ಚೆಕ್, ಡಿಡಿ ಅಥವಾ ಆನ್‌ಲೈನ್‌ನಲ್ಲಿ ನೆರವು ನೀಡಬಹುದು.